ನಗರ ಡಿವಿಜ್ಯ.

ನಗರ ಡಿವೀಜ್ಯ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1885ನೇ ಇಸವಿ ಆರ್ಜೀ ನಂಬರ್ 96.

ಮೃತಪಟ್ಟ ಬ್ರಹ್ಮಸಮುದ್ರದ ವಾಜಿ ಪಟೇಲ್ ಸಿದ್ದೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸಿದ್ದಲಿಂಗೇಗೌಡ, ಮೃತಪಟ್ಟ ಸದರೀ ಸಿದ್ದೇಗೌಡನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕಡೂರು ತಾಲ್ಲೂಕು ಬ್ರಹ್ಮಸಮುದ್ರದ ಸ್ಥಳದ ಸಿದ್ದಲಿಂಗೇಗೌಡನು ಸದರೀ ವಾಸಸ್ಥನಾಗಿ ಮೃತಪಟ್ಟಸಿದ್ದೇಗವುಡನ ಜಿಂದಗಿ ಬಗ್ಯಾಗಿ ಎರತಕ್ಕ 300 ರೂಪಾಯಿಗಳ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸಿದ್ದಲಿಂಗೇಗವುಡನ ಅರ್ಜೀಯನ್ನು 1885ನೇ ಇಸವಿ ನವಂಬರ್ ತಿಂಗಳು ತಾರೀಖು 19ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅಕ್ಟೋಬರ್ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟುಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಕಡೂರು ಡಿಸ್ಟ್ರಿಕ್ಟ್.

ಕಡೂರು ಡಿಸ್ಟ್ರಿಕ್ಟ್ ಕೊಪ್ಪದ ತಾಲ್ಲೂಕು ತ್ರಿಂಗೇರಿ ಗ್ರಾಮದಲ್ಲಿ ವೈಶ್ಯನ ಮೊಮ್ಮಗಿರಿ ವೆಂಕಟರಮಣಯ್ಯನ ಮನೆ ಮಹಡಿ ಮೇಲೆ ದಕ್ಷಿಣ ಪಾರ್ಶ್ವದ ಕೋಣೆಗೆ ಸ್ಯ 1885ನೇ ಇಸವಿ ಸೆಪ್ಟಂಬರ್ 17ನೇ ತಾರೀಖಿನ ರಾತ್ರೆ ಯಾರೋ ಕನ್ನಾಹಾಕಿ ಹಿತ್ತಾಳೆ ಸಂದೂಕದವಳಗೆ ಯಿದ್ದ ಮಾಲ್ ಕಳವು ಮಾಡಿಕೊಂಡು ಹೋದ ಬಾಬತು ಫಿರ್ಯಾದಿ ಹೇಳುವ ಮಾಲ್ ತಪಸೀಲ್‌ಪಟ್ಟಿ.

ನಂಬರ್.		ರೂ.	ಆ.	ಪೈ.
1.	ಜೊಕ್ಕ್ಯಭಂಗಾರದ ಪಟ್ಟಿ ಹಿಂಬಳೆ ಜೊತೆ 1ಕ್ಕೆ ಅರವತ್ತು ವರಹಾ ತೂಕ, ಹಿಂಬಳೆ 1ಕ್ಕೆ ಗಿಣಿ 6 ಹುವ್ವು 1 ಬುಡದಲ್ಲಿ ಯರಡು ಕೀಲು ಮೇಲೆ ತಿರಪು ಕೀಲು ಈ ಮೇರೆ ಯಿರುವದು.	360	0	0
2.	ಮುಳ್ಳುಕಂಕಣದ ಜೊತೆ 1ಕ್ಕೆ 20 ವರಹಾ ತೂಕ ಜೊಕ್ಕ್ಯಭಂಗಾರ ಪೈಕಿ 1ಕ್ಕೆ ಕೀಲು ಮುರದು ಯಿತ್ತು.	120	0	0
3.	ಕಿವ್ಮಲಲಾಟದ ಜೊತೆ 1ಕ್ಕೆ ತೂಕ 40 ವರಹಾ, ಕಿವ್ಮಲಲಾಟ 1ಕ್ಕೆ ಕೆಂಪು 10ರಂತೆ ಕೆತ್ತಿ ಕೆಲಸ ಮಾಡಿ ಯಿತ್ತು ಕೆಂಪು ಕೆಲವು ವೆದರಿ ಹೋಗಿ ಯಿತ್ತು ಅದು ನೆನಪು ಯಿಲ್ಲಾ .. :	240	0	0
4.	ಜಳಿಕಿ ಜೊತೆ 1ಕ್ಕೆ ತೂಕ 12 ವರಹಾ, ಜಳಕಿ 1ಕ್ಕೆ ಗುಂಡು 5 ಹವಳ 4 ಮತ್ತೊಂದಕ್ಕೆ ಗುಂಡು 4 ಹವಳ 5 ಈ ಮೇರೆ ಯಿಧೆ	72	0	0
5.	ಭಂಗಾರದ ನಾಗಮುರಿ ಜೊತೆ 1ಕ್ಕೆ ಕೇರು ವಂಡೂಕಾಲು, ಜೊಕ್ಕ್ಯಭಂಗಾರದ ಬಾಬತು ಜೊಳ್ಳು ಗೆಜ್ಜೆ ಕುಚ್ಚ್ವುವಾಡಿ ಮುರಿ 1ಕ್ಕೆ 5 ಕುಚ್ಚ್ವು ಯಿದೆ	600	0	0
6.	ಕಟ್ಟ್ಯಾಣಿಸರ 1ಕ್ಕೆ ಜೊಕ್ಕ್ಯ ಭಂಗಾರದ ಬಾಬತು ವಂಭತ್ತು ಯಳೆ ಸರದ ಪೈಕೀ ಯಂಟು ಯಳೆ ಯಿದ್ದ ಬಾಬತು ತೂಕ 30 ವರಹಾ ಬಾಬತು	180	0	0
7.	ಗುಂಡಿನಸರಾ 1ಕ್ಕೆ ಜೊಕ್ಕ್ಯಭಂಗಾರ 15 ವರಹಾತೂಕ ಗುಂಡುಗಳು 79	90	0	0
8.	ಮುತ್ತಿನಗಿಣಿ ಪಾಲೀಜೊತೆ 1ಕ್ಕೆ ಭರ್ತಿಯಾಗಿ ಮುತ್ತು ಸುತ್ತಿದೆ	350	0	0
9.	ವಿಾನುಜಾವಲಿ ಜೊತೆ 1ಕ್ಕೆ ಯರಡುಕಜೀನೂ ಕೆಂಪು ಕಾಣುವದು ಸರಪಣಿ ಭಂಗಾರದ ಬಾಬತು ಯಿದಕ್ಕೆ ಚಿನ್ನೈಮಣಿ ಸುತ್ತಿದೆ	60	0	0
10.	ಚಂದ್ರಮುರುವಿನ ಜೊತೆ 1ಕ್ಕೆ ಕುಂದಣ ಕೆತ್ತಿದ ಬಾಬತು ಯರಡು, ಮುರು 1ಕ್ಕೆ ಕೆಂಪು 3 ಕಮಲದ ವಜ್ರ 10 ಈ ಮೇರೆ ಜೊತೆ 1ಕ್ಕೆ. .. .. — ..	800	0	0

ಈ ಹತ್ತು ನಂಬರ್ ಮಾಲ್‌ಗಳು ಹಿತ್ತಾಳೆ ಪೆಟ್ಟಿಗೆ ಕಳಗೆ ಹಾಕಿ ಯಿಟ್ಟು ಯಿದ್ದದ್ದು ಸದರೀ ಸಂದೂಕ ಸಹಿತ.

		ರೂ.	ಆ.	ಪೈ
	ಸದರೀ ಪಟ್ಟಿಗೆ ಹಾಕಿ ಯಿಟ್ಟಿದ್ದ ಪತ್ತದ ಪಟ್ಟಿಗೆ ವಳಗೆ ಯಿದದ್ದು.			
11.	ವಳ್ಳಿ ಜೊಕ್ಕ ಭಂಗಾರದ ಬಂದಿ ಸಲಿಗೆ 1ಕ್ಕೆ ತೊಲೆ 43 ರೂಪಾಯಿ ತೂಕ	850	0	0
12.	ಪಳ್ಳೀ ದೊಂನೆ ದೊಡ್ಡದು 3, ಸಂಣದು 2, ಜಮ್ಮಾ 5	40	0	0
13.	ಬೆಳ್ಳಿ ಬಟ್ಲು 6 ಪೈಕೀ ವಂದಕ್ಕೆ ಬುಡಡಲ್ಲಿ ಹೀನವಿದೆ, ಮೇಲೆ ಬಟ್ಲು ತುದಿಯಲ್ಲಿ ವಂದು ಸುತ್ತು ನಕ್ಷೆ ಯಿದೆ, ಬಾಕೀದೆಲ್ಲಾ ಜೋಳು ಬಟ್ಲುಗಳು ಯಿವುಗಳಲ್ಲಿ ಕೆಲವಕ್ಕೆ ವಿಳಾಸವಿಧೆ, ಕ್ರಯಮತದಿಂದ ಕ್ರಯವಾಗಿ ಬಂದದ್ದು	200	0	0
14.	ಸದರೀ ಪತ್ತದ ಪೆಟ್ಟಿಗೆ ವಳಗೆ ಬಿಳಿ ಆರುವೆಯಲ್ಲಿ ಕಟ್ಟಿ ಯಿದ್ದ ಹಿತ್ತಾಳೆ ಕಂಜು ತಾಂಬ್ರ ವಗ್ಗೈರವು ಳ ಕುದರೆ ಆಕಳು ಮತ್ತು ಜಂತದ ಬಾಚಣಿಸಿಗಳು ಯಿದಕ್ಕೆ ಹಸರು ಕೆಂಪು ಬಿಳೀದು ಮಣಿಗಳನ್ನು ಹಣದು ಯಿರುವ ಬಾಬತು ಚಿಲ್ಲರೆ ಸಾಮಾನಿನ ಗಂಟು 1ಕ್ಕೆ ಅಂದಾಜು ಹತ್ತು ರೂಪಾಯಿ ಬಾಳುವದು ಅದದು ಗ್ಣಾಪಕವಿಲ್ಲಾ.	10	0	0
		3,972	0	0

ಮೂರು ಸಾವಿರದ ವಂಬೈನೂರು ಯಪ್ಪತ್ತೆರಡು ರೂಪಾಯಿನ ಮಾಲ್‌ಗಳು ಯಿದು ವಿವಾಯ ಯಿನ್ನೇನು ಹೋಗಿರುವದಿಲ್ಲಾ.

ಈ ಬಾಬತು ಮಾಲ್‌ಗಳನ್ನ ಪತ್ತೆ ಮಾಡಿ ಕೊಟ್ಟವರಿಗೆ ದರ ಶೇಕಡಾ 1ಕ್ಕೆ ಐದು ರೂಪಾಯಿಗಳ ವೀರೆ ಇನಾಂ ಕೊಡುವದಕ್ಕೆ ವಪ್ಪಿ ಯಿಧೇನೆಂತಲೂ ಈ ಸಂಗತಿ ಫಾಯಿಷ್ ಮಾಡಿಸಲೇಕೆಂತಲೂ ಸಿರ್ಯಾದಿ ಮ್ಹೂಡಗಿರಿ ವೆಂಕಟರಮಣಯ್ಯನು ಕೊಪ್ಪ ತಾಲ್ಲೂಕು ಅಮಲ್‌ದಾರ್ರ ರೂಬರು ಅರ್ಜೀ ಹಾಜರ್ ಮಾಡಿಧಾನೆ.

ಕೃಷ್ಣಯ್ಯಂದಾರ್,
ಪೊಲೀಸ್ ಅಸಿಸ್ಟೆಂಟ್ ಕಮ್ಮಿಷ್ನರ್.

ಮೈಸೂರ ಗೆಜೆಟ್, ಚಂದಾ ದರ ವಗ್ಗೈರೇ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಶಿವಾಯಿ ಇತರ ಸ್ಥಳಗಳಿಗೆ. ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ	ದಾವಾಷಾಯಿ ಪ್ರಕಾರ ದರಗಳು.			
ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿ ಕೇಟ್ ಬಗ್ಯೆ ನೋಟೀಸುಗಳು :—				
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..			2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ			1	4
ಸಿವಿಲ್ ಪ್ರೊಸಿಜ್ಯೂರ್ ಕೋಡಿನ 374ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅರ್ಜಿ ಕೇರ್ಜಗಳ ಬಗ್ಯೆ ನೋಟೀಸುಗಳಿಗೆ :—				
ಮೊದಲನೇ ದಫಾ			5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ			2	8
ಸಿವಿಲ್ ಪ್ರೊಸಿಜ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.				
ಡ್ಯುಪ್ಲಿಕೇಟ್ ಸಾಫೀಪಟ್ಟೇ ವಗ್ಗೈರೇ ಕೊಡುವ ಬಗ್ಯೆ ರವಿನ್ಯೂ ಆಫಿಸರ್‌ಗಳು ಕೊಡುವ ನೋಟೀಸುಗಳಿಗೆ :—				
ಮೊದಲನೇ ಸಲಕ್ಕೆ .. ಪುಟ 1ಕ್ಕೆ ..			10	0
ಯಿರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ „ ..			5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತ :—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಜ್ತಿ 1ಕ್ಕೆ ..			0	8
ಯಿರಡನೇ ದಫಾ ಡಿಟೋ ಡಿಟೋ ..			0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ			0	4

ಬಿ.ಎಸ್.ಜೇಬ್ ಹುಕ್ಕುಂ,
ಹೆಚ್. ಪಡಿಸ್ಹ,
ಮೈ. ಗೆ. ಕಂಪೈಲರ್.